529(714) ಶ್ರೀ ಯಡಿಯೂರಪ್ಪ ಬಿ ಎಸ್ (ಶಿಕಾರಿಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಡಿಕೆ ಬೆಳೆಯುವ ಪ್ರದೇಶಗಳು ಯಾವುವು ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ

ಆ) ರಾಜ್ಯದಲ್ಲಿ ಬೆಳೆಯುವ ಒಟ್ಟು ಅಡಿಕೆ ಪ್ರಮಾಣ ಎಷ್ಟು?

ಇ) ಅಡಿಕೆ ಧಾರಣೆ ಇಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಧಾರಣೆ ಕುಸಿಯಲು ಕಾರಣವೇನು?

ಉ) ಅಡಿಕೆಗೆ ಬೆಂಬಲ ಬೆಲೆ ನಿರ್ಧರಿಸಲು ಕಾರ್ಯಪಡೆ ರಚಿಸಲಾಗಿದೆಯೆ? ಕಾರ್ಯಪಡೆಯ ಸದಸ್ಯರು ಯಾರು?

ಊ) ಕಾರ್ಯಪಡೆ ಈವರೆಗೆ ಎಷ್ಟು ಬಾರಿ ಸಭೆ ಸೇರಿದೆ

ಋ) ಬೆಳೆಗಾರರು ಒಂದು ಕೆ ಜಿ ಅಡಿಕೆಗ ನೀಡಬೇಕೆಂದು ಆಗ್ರಹಿಸುತ್ತಿರುವ ಹಣ ಎಷ್ಟು?

ಎ) ಸರಕಾರ ಇವರ ಆಗ್ರಹವನ್ನು ಪುರಸ್ಕರಿಸಿದೆಯೇ?

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಮಲೆನಾಡು, ಕರಾವಳಿ, ಮತ್ತು ಮೈದಾನ ಪ್ರದೇಶದ ಜಿಲ್ಲೆಗಳಲ್ಲಿ ಒಟ್ಟು 1 32 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ

ಆ) ಒಟ್ಟು ಉತ್ಪಾದನೆ 1 70 ಲಕ್ಷ ಟನ್‌ಗಳು

ಇ) ಬಂದಿರುತ್ತದೆ

ಈ) ಅಡಿಕೆ ಬೆಳೆ ವಿಸ್ತರಣೆ, ಉತ್ಪಾದನೆಯಲ್ಲಿ ಹೆಚ್ಚಳ, ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಿ ಬಳಕೆ ಕಡಿಮೆ ಆಗಿರುವುದು ಮತ್ತು ಕಳಪೆ ಗುಣಮಟ್ಟದ ಅಡಿಕೆ ಹೊರ ದೇಶಗಳಿಂದ ಆಮದಾಗುತ್ತಿರುವುದರಿಂದ ಅಡಿಕೆ ಧಾರಣೆ ಕುಸಿಯಲು ಕಾರಣವಾಗಿದೆ ಎಂದು ತಿಳಿದು ಬಂದಿದೆ

ಉ) ಅಡಿಕೆಗೆ ಬೆಂಬಲ ಬೆಲೆ ಸೇರಿದಂತೆ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಮಾಡಲು ಕಾರ್ಯಪಡೆ ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಈ ಕಾರ್ಯಪಡೆಯಲ್ಲಿ ತೋಟಗಾರಿಕೆ ಇಲಾಖೆ, ಸಹಕಾರ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಕ್ಯಾಂಪ್ಕೋ, ಕೆಪೆಕ್ ಸಂಸ್ಥೆ, ವಿಮಾ ಕಂಪನಿಯ ಪ್ರತಿನಿಧಿಗಳು ಮತ್ತು ಪ್ರಾಂತೀಯ ಅಡಿಕೆ ಬೆಳೆಗಾರರು ಸದಸ್ಯರಾಗಿರಲು ಪ್ರಸ್ತಾಪಿಸಲಾಗಿದೆ

ಊ) ಕಾರ್ಯಪಡೆ ರಚನೆಯ ಹಂತದಲ್ಲಿ ಇರುವುದರಿಂದ ಸಭೆಗಳು ನಡೆದಿರುವುದಿಲ್ಲ

ಋ) ಪ್ರತಿ ಕೆ ಜಿ ಚಾಲಿ ಅಡಿಕೆಗೆ ರೂ 80–00 ಮತ್ತು ಪ್ರತಿ ಕೆ ಜಿ ಕೆಂಪು ಅಡಿಕೆಗೆ ರೂ 100–00 ರಂತೆ ನೀಡಬೇಕೆಂದು ಅಡಿಕೆ ಬೆಳೆಗಾರರು ಕೋರಿರುತ್ತಾರೆ

ಎ) ಸರ್ಕಾರವು 2002ರಲ್ಲಿ ಪ್ರತಿ ಕೆ ಜಿ ಚಾಲಿ ಅಡಿಕೆಗೆ ರೂ 60–00 ಮತ್ತು ಪ್ರತಿ ಕೆ ಜಿ ಕೆಂಪು ಅಡಿಕೆಗೆ ಈಗ ರೂ 85–00ರಂತೆ ಬೆಂಬಲ ಬೆಲೆ ನಿಗಧಿಪಡಿಸಿದೆ

ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2004

[2004ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 23]

2004-2005 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ

2004-2005 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ವೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾ ಿ, ಎಂದರೆ:-

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 2004 ಎಂದು ಕರೆಯತಕ್ಕದ್ದು

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2004-2005ನೇ ಹಣಕಾಸು ವರ್ಷಕ್ಕಾಗಿ 73,36,58,000.00 ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2004-2005ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ಪೂರೈಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಎಪ್ಪತ್ತಮೂರು ಕೋಟಿ ಮೂವತ್ತಾರು ಲಕ್ಷದ ಐವತ್ತೆಂಟು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು

3 **ಧನವಿನಿಯೋಗ** – ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ ಲಕ್ಷಗಳಲ್ಲಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	25 00	-	25 00
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ಬಂಡವಾಳ	100 00	-	100 00
03	ಆರ್ಥಿಕ	ರಾಜಸ್ವ	524 79	-	524 79
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	200 00	-	200 00
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	ರಾಜಸ್ವ	2091 10	-	2091 10
08	ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	150 00	-	150 00
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	1691 72	-	1691 72
13	ಆಹಾರ ಮತ್ತು ನಾಗರಿಕ ಸರಬರಾಜು	ರಾಜಸ್ವ	500 00	-	500 00
14	ಕಂದಾಯ	ರಾಜಸ್ವ	249 83	-	249 83
17	ಶಿಕ್ಷಣ	ರಾಜಸ್ವ	500 00	-	500 00
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	240 56	-	240 56
21	ಜಲಸಂಪನ್ಮೂಲ	ಬಂಡವಾಳ	247 58	-	247 58
23	ಕಾರ್ಮಿಕ	ರಾಜಸ್ವ	646 00	-	646 00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	85 00	-	85 00
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	35 00	-	35 00
27	ಕಾನೂನು	ರಾಜಸ್ವ	50 00	-	50 00
	ಒಟ್ಟು	ರಾಜಸ್ವ	**6989 00**	-	**6989 00**
		ಬಂಡವಾಳ	**347 58**		**347 58**
	ಒಟ್ಟು ಜುಮ್ಲಾ		**7336 58**	-	**7336 58**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2004-2005 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿ ಹಾಗೂ
ಹಣಕಾಸು ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ